# ಸೂಚನಾ ಫಲಕಕ್ಕೆ

<u>ಎರಡನೇ ಸುತ್ತಿನ ಕೌನ್ಸಿಲಿಂಗ್‌ಗೆ ಹಾಜರಾಗುವ ಬಿ.ಇಡಿ ಅಭ್ಯರ್ಥಿಗಳ ಮಾಹಿತಿಗಾಗಿ</u>

2016–17ನೇ ಸಾಲಿನ ಎರಡು ವರ್ಷದ ಬಿ.ಇಡಿ ಕೋರ್ಸಿನ ದಾಖಲಾತಿಗಾಗಿ ದಿನಾಂಕ: 06-03-2017 ರಿಂದ 10-03-2017 ರವರೆಗೆ ಕೇಂದ್ರೀಕೃತ ದಾಖಲಾತಿ ಘಟಕ, ಕೆಂಪೇಗೌಡ ರಸ್ತೆ, ಬೆಂಗಳೂರು ಇಲ್ಲಿ ನಡೆಯುವ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲಿರುವ ಅಭ್ಯರ್ಥಿಗಳಿಗೆ ಸೂಚನೆಗಳು.

| | | |
|---|---|---|
| 1 | ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳು | ದಿನಾಂಕ: 03-03-2017 ರಂದು ಪ್ರಕಟಿಸಿರುವ ದಿನಾಂಕವಾರು ಕೌನ್ಸಿಲಿಂಗ್ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳು ಮಾತ್ರ ನಿಗದಿಪಡಿಸಿದ ದಿನದಂದು ಮಾತ್ರ ಕೌನ್ಸಿಲಿಂಗ್‌ಗೆ ಹಾಜರಾಗಲು ಅವಕಾಶವಿರುತ್ತದೆ. |
| 2 | ಸೀಟುಗಳ ಲಭ್ಯತೆ | ದಿನಾಂಕ: 06-03-2017 ರಿಂದ ನಡೆಯುವ ಕೌನ್ಸಿಲಿಂಗ್‌ಗೆ ವಿವಿಧ ಜಿಲ್ಲೆಯ ಕಾಲೇಜುಗಳಲ್ಲಿ ಲಭ್ಯವಿರುವ ಪ್ರವರ್ಗವಾರು ಸೀಟುಗಳ ಸಂಖ್ಯೆಯನ್ನು ನಮೂದಿಸಿ ಪ್ರಕಟಿಸಲಾಗುವುದು. ಪ್ರತಿನಿತ್ಯ ಕೌನ್ಸಿಲಿಂಗ್ ಮುಗಿದ ನಂತರ ಉಳಿಕೆ ಸೀಟುಗಳ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಹಾಗೂ ಕೇಂದ್ರೀಕೃತ ದಾಖಲಾತಿ ಘಟಕದ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲಾಗುತ್ತದೆ. ದಿನಾಂಕ: 03-03-2017 ರಂದು ಪ್ರಕಟಿಸಿರುವ ಕೌನ್ಸಿಲಿಂಗ್ ರ್‍ಯಾಂಕಿಂಗ್ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳು ಮಾತ್ರ ಕೌನ್ಸಿಲಿಂಗ್‌ಗೆ ಹಾಜರಾಗಲು ಅರ್ಹತೆ ಹೊಂದಿದ್ದು, ಅಂತಹವರು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವ ಪೂರ್ವದಲ್ಲಿ ಸೀಟುಗಳು ಲಭ್ಯವಿರುವ ಜಿಲ್ಲೆ ಮತ್ತು ಕಾಲೇಜುಗಳನ್ನು ಪರಿಶೀಲಿಸಿ ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಹಾಜರಾಗುವುದು. |
| 3 | ಕೌನ್ಸಿಲಿಂಗ್ ದಿನಾಂಕ:–<br><br>ಸಮಯ: –<br><br>ಸ್ಥಳ:– | 06-03-2017 ರಿಂದ ಪ್ರಾರಂಭವಾಗುತ್ತದೆ. ರಜಾ ದಿನಗಳಂದು ಕೌನ್ಸಿಲಿಂಗ್ ಇರುವುದಿಲ್ಲ. (ಶನಿವಾರ ಮತ್ತು ಭಾನುವಾರ)<br><br>ಪ್ರತಿ ದಿನ ಬೆಳಿಗ್ಗೆ 9.30 ಗಂಟೆಗೆ ಪ್ರಾರಂಭ<br><br>ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ.ರಸ್ತೆ, ಕಾವೇರಿ ಭವನದ ಎದುರು, ಬೆಂಗಳೂರು-560009. ಮೈಸೂರು ಬ್ಯಾಂಕ್ ಮುಖ್ಯ ಕಚೇರಿ ಹತ್ತಿರ |
| 4 | ಕೌನ್ಸಿಲಿಂಗ್‌ಗೆ ಅರ್ಹತೆ ಹೊಂದಿಲ್ಲದ ಅಭ್ಯರ್ಥಿಗಳು | ಎ) ದಿನಾಂಕ: 30-01-2017 ರಂದು ಪ್ರಕಟಿಸಿರುವ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿ ಹಂಚಿಕೆ ಮಾಡಿದ್ದ ಸಂಸ್ಥೆಗಳಲ್ಲಿ ವ್ಯವಸ್ಥಾಪಕ ಕೇಂದ್ರಗಳಲ್ಲಿ ದಾಖಲಾತಿ ಪಡೆದಿರುವವರು ಕೌನ್ಸಿಲಿಂಗ್‌ಗೆ ಹಾಜರಾಗಲು ಅರ್ಹತೆ ಹೊಂದಿರುವುದಿಲ್ಲ. (ವಿಶೇಷ ಪ್ರಕರಣಗಳನ್ನು ಹೊರತುಪಡಿಸಿದೆ)<br>ಬಿ) ದಿನಾಂಕ: 20-02-2017 ರಿಂದ 03-03-2017 ರವರೆಗೆ ನಡೆದ ಒಂದನೇ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಯಾವುದೇ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳದೆ ತಿರಸ್ಕರಿಸಿವವರು ಸಹ ಮುಂದುವರಿದ ಕೌನ್ಸಿಲಿಂಗ್‌ನಲ್ಲಿ ಹಾಜರಾಗಲು ಅರ್ಹತೆ ಹೊಂದಿರುವುದಿಲ್ಲ.<br><br>ಸಿ) ಹಂಚಿಕೆಯಾದ ಸಂಸ್ಥೆಯ ಬದಲಾವಣೆಗೆ ಅವಕಾಶವಿರುವುದಿಲ್ಲ. |
| | | ಕಲಾ ವಿಭಾಗಕ್ಕೆ ರೂ. 5000+1000+4000 |

| | | |
|---|---|---|
| 5 | ದಾಖಲಾತಿ ಶುಲ್ಕ | ವಿಜ್ಞಾನ ವಿಭಾಗಕ್ಕೆ ರೂ. 5150+1000+4000<br><br>ಪ್ರತ್ಯೇಕ ಮೂರು ಬ್ಯಾಂಕ್ ಹುಂಡಿಗಳನ್ನು **(Demand Draft)** ಮೈಸೂರು ಬ್ಯಾಂಕ್‌ನಿಂದ ತರುವುದು. ಒಂದು ವೇಳೆ ಮೈಸೂರು ಬ್ಯಾಂಕ್ ಲಭ್ಯವಿಲ್ಲದಿದ್ದಲ್ಲಿ ಇತರೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಡೆಯಬಹುದು. ವಾರ್ಷಿಕ ಆದಾಯ ರೂ. 2.50 ಲಕ್ಷಕ್ಕಿಂತ ಕಡಿಮೆ ಇದ್ದು, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರುವ ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳಿಗೆ ಮಾತ್ರ ಶುಲ್ಕ ವಿನಾಯಿತಿ ಇರುತ್ತದೆ. ಇವರು ಮೇಲೆ ತಿಳಿಸಿರುವಂತೆ ಬ್ಯಾಂಕ್ ಹುಂಡಿಗಳನ್ನು ತರುವ ಅವಶ್ಯಕತೆ ಇರುವುದಿಲ್ಲ. ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪತ್ರ ಸಲ್ಲಿಕೆ ಕಡ್ಡಾಯವಾಗಿರುತ್ತದೆ. ಆದರೆ ಉಳಿದ ಪ್ರವರ್ಗವಾರು ಅಭ್ಯರ್ಥಿಗಳು ಮೇಲೆ ತಿಳಿಸಿರುವಂತೆ ಪ್ರತ್ಯೇಕವಾಗಿ ಬ್ಯಾಂಕ್ ಹುಂಡಿಗಳನ್ನು ತರುವುದು. |
| 6 | ಬ್ಯಾಂಕ್ ಹುಂಡಿಯನ್ನು ಖರೀದಿಸುವ ವಿಧಾನ | ಅಭ್ಯರ್ಥಿಗಳು ಕೌನ್ಸಿಲಿಂಗ್‌ಗೆ ಹಾಜರಾಗುವ ಮುಂಚೆಯೇ ತಮ್ಮ ಸ್ವಂತ ಸ್ಥಳಕ್ಕೆ ಸಮೀಪದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಯಾವುದೇ ಶಾಖೆಯಿಂದ ಮೇಲೆ ತಿಳಿಸಿರುವಂತೆ ಮೂರು ಪ್ರತ್ಯೇಕ ಬ್ಯಾಂಕ್ ಹುಂಡಿಗಳನ್ನು" **Special Officer, C.A.C. Bangalore" Payable at Bangalore** ಇವರ ಹೆಸರಿಗೆ ಬ್ಯಾಂಕ್ ಹುಂಡಿಗಳನ್ನು ಪಡೆದು ತರಬೇಕು. |
| 7 | ದಿನಾಂಕ:06-03-2017 ರಿಂದ ನಡೆಯುವ ಕೌನ್ಸಿಲಿಂಗ್‌ಗೆ ಸಂಬಂಧಿಸಿದಂತೆ ಪ್ರಕಟಿಸಿರುವ ಪಟ್ಟಿ | ದಿನಾಂಕ: 06-03-2017 ರಿಂದ ನಡೆಯುವ ಕೌನ್ಸಿಲಿಂಗ್‌ಗೆ ಅರ್ಹತೆ ಹೊಂದಿರುವ ಅಭ್ಯರ್ಥಿಗಳ ವಿವರಣಾತ್ಮಕ ಸಮಗ್ರ ಪಟ್ಟಿ. |
| 8 | ಕೌನ್ಸಿಲಿಂಗ್‌ನಲ್ಲಿ ಸಲ್ಲಿಸಬೇಕಾದ ಮೂಲ ದಾಖಲೆಗಳು | 1. ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿ<br>2. ಪಿ.ಯು.ಸಿ. ಮೂಲ ಅಂಕಪಟ್ಟಿ<br>3. ಪದವಿಯ ಎಲ್ಲಾ ವರ್ಷಗಳ ಎಲ್ಲಾ ಪ್ರಯತ್ನಗಳ ಮೂಲ ಅಂಕಪಟ್ಟಿಗಳು<br>4. ಸ್ನಾತಕೋತ್ತರ ಪದವಿಯ ಅಂಕಪಟ್ಟಿಗಳು. (ನಮೂದಿಸಿದ್ದಲ್ಲಿ ಮಾತ್ರ) (ಪುನರಾವರ್ತಿತ ಅಭ್ಯರ್ಥಿಗಳು ಪ್ರತೀ ವರ್ಷದ ಕ್ರೋಢೀಕೃತ ಅಂಕಪಟ್ಟಿಯನ್ನು ಅಥವಾ ಲಭ್ಯವಿಲ್ಲದಿದ್ದಲ್ಲಿ ಎಲ್ಲಾ ಪ್ರಯತ್ನಗಳ **(All Attempts)** ಅಂಕಪಟ್ಟಿಗಳನ್ನು ಲಗತ್ತಿಸುವುದು)<br>5. ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಮಾಡಿಸಿರುವ ವ್ಯಾಸಂಗ ಪ್ರಮಾಣ ಪತ್ರ (ಕನಿಷ್ಟ ಏಳು ವರ್ಷ)<br>6. 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಅನ್ವಯಿಸುವವರು ಮಾತ್ರ)<br>7. ಜಾತಿ ಪ್ರಮಾಣ ಪತ್ರ<br>8. ಆದಾಯ ಪ್ರಮಾಣ ಪತ್ರ ಪರಿಶಿಷ್ಟ ಜಾತಿ & ಪಂಗಡದ ಅಭ್ಯರ್ಥಿಗಳಿಗೆ ಮಾತ್ರ.<br>9. ವಿಶೇಷ ಗುಂಪಿನ ಪ್ರಮಾಣ ಪತ್ರಗಳು (ವಿಶೇಷ ಗುಂಪಿನಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ)<br>10. ಮೂಲ ಆನ್‌ಲೈನ್ ಅರ್ಜಿಯ ಅಭ್ಯರ್ಥಿ ಪ್ರತಿ / ಬ್ಯಾಂಕ್ ಚಲನ್<br>11. ಮೇಲೆ ತಿಳಿಸಿರುವಂತೆ 1/2/3 ಮೈಸೂರು ಬ್ಯಾಂಕ್ ಹುಂಡಿಗಳು<br>12. ನೇಮಕಾತಿ ಪ್ರಾಧಿಕಾರದಿಂದ ದೃಢೀಕೃತ ಸೇವಾ ಪ್ರಮಾಣ ಪತ್ರ ಮತ್ತು ವ್ಯಾಸಂಗ ಮಾಡಲು ಸರ್ಕಾರದಿಂದ ಪಡೆದ ಅನುಮತಿ ಪತ್ರ (ಸರ್ಕಾರಿ / ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿದ್ದು, ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಮಾತ್ರ) ಪದವಿ ಪೂರ್ವ ಕಾಲೇಜು ಉಪನ್ಯಾಸಕರೂ ಸಹ ಸಲ್ಲಿಸಬೇಕು.<br>13. ಹೈದರಾಬಾದ್ ಕರ್ನಾಟಕ ಅಭ್ಯರ್ಥಿಗಳು 371(ಜೆ) ಪ್ರಕಾರ ಪ್ರಮಾಣ ಪತ್ರ ಉಪವಿಭಾಗಾಧಿಕಾರಿಗಳಿಂದ ಪಡೆದಿರಬೇಕು. |

**ಸೂಚನೆಗಳು:-**

1. ಸಂಸ್ಥೆಗಳ ಬದಲಾವಣೆ ಬಯಸುವ ಅಭ್ಯರ್ಥಿಗಳು, ಪರಸ್ಪರ ವರ್ಗಾವಣೆ ಬಯಸುವ ಅಭ್ಯರ್ಥಿಗಳು, ಈಗಾಗಲೇ ಸಂಸ್ಥೆಗಳಲ್ಲಿ ದಾಖಲಾತಿ ಪಡೆದಿರುವ ಅಭ್ಯರ್ಥಿಗಳು, ವ್ಯವಸ್ಥಾಪಕ ಕೇಂದ್ರದಲ್ಲಿ ದಾಖಲಾತಿ ಪಡೆದು ದಾಖಲಾತಿ ಪತ್ರವನ್ನು ಹೊಂದಿರುವ ಅಭ್ಯರ್ಥಿಗಳು ದಿನಾಂಕ: 06-03-2017 ರಿಂದ ನಡೆಯುವ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹತೆ ಹೊಂದಿರುವುದಿಲ್ಲ.
2. ಭಾಗಶ: (**Incomplete**) ಮೂಲ ದಾಖಲೆಗಳನ್ನು ಹಾಜರುಪಡಿಸುವ ಅಭ್ಯರ್ಥಿಗಳು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವಂತಿಲ್ಲ.
3. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸದೇ ಇರುವ ಅಭ್ಯರ್ಥಿಗಳು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
4. ಕೌನ್ಸಿಲಿಂಗ್ ವೇಳಾ ಪಟ್ಟಿಯಲ್ಲಿ ಆಯಾ ದಿನಾಂಕಗಳ ರ್‍ಯಾಂಕ್‌ಗೆ ಹಾಗೂ ಪ್ರವರ್ಗವಾರು ನೋಂದಣಿ ಸಂಖ್ಯೆಗಳನ್ನು ನೀಡಲಾಗಿದೆ. ಇದನ್ನು ಗಮನಿಸಿ ಅಭ್ಯರ್ಥಿಗಳು ಆಯಾ ದಿನಾಂಕಗಳಂದು ಕಡ್ಡಾಯವಾಗಿ ಕೌನ್ಸಿಲಿಂಗ್‌ಗೆ ಹಾಜರಾಗುವುದು.
5. ಕೌನ್ಸಿಲಿಂಗ್‌ಗೆ ಹಾಜರಾದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ಸೀಟಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ಲಭ್ಯವಿರುವ ಪ್ರವರ್ಗವಾರು ಸೀಟುಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಕೌನ್ಸಿಲಿಂಗ್‌ಗೆ ಅಭ್ಯರ್ಥಿಯು ತನ್ನ ಸ್ವಂತ ಜವಾಬ್ದಾರಿಯ ಹಾಗೂ ಸ್ವಂತ ಖರ್ಚಿನ ಮೇಲೆ ಹಾಜರಾಗುವುದು.
6. ಅರ್ಜಿ ಸಲ್ಲಿಸಿದ್ದು ಕೌನ್ಸಿಲಿಂಗ್‌ಗೆ ಅರ್ಹರಿರುವ ಎಲ್ಲಾ ಅಭ್ಯರ್ಥಿಗಳ ರ್‍ಯಾಂಕ್ ಮತ್ತು ಕೌನ್ಸಿಲಿಂಗ್‌ಗೆ ಸಂಬಂಧಿಸಿದ ಮಾಹಿತಿಯು **www.schooleducation.kar.nic.in** ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
7. ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ತೀರ್ಮಾನ ಮಾಡುವ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದು ಅಭ್ಯರ್ಥಿಯ ರ್‍ಯಾಂಕ್‌ನಲ್ಲಿ ವ್ಯತ್ಯಾಸವಾದಲ್ಲಿ ಅಂತಹ ಅಭ್ಯರ್ಥಿಗಳು ಆಯಾಯ ವಿಷಯವಾರು, ಪ್ರವರ್ಗವಾರು ಮರು ನಿಗದಿಪಡಿಸಿದ ರ್‍ಯಾಂಕ್ ಸ್ಥಾನದಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗಬಹುದು.
8. ಪ್ರಸ್ತುತ ಚಾಲ್ತಿಯಲ್ಲಿರುವ ಕೌನ್ಸಿಲಿಂಗ್ ಪ್ರಕ್ರಿಯೆ ಮುಕ್ತಾಯವಾದ ನಂತರ ಸೀಟುಗಳು ಉಳಿದಲ್ಲಿ ಮಾತ್ರ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಮುಂದಿನ ರ್‍ಯಾಂಕ್‌ಗಳಿಗೆ ಮುಂದುವರಿಸಲಾಗುವುದು. ಅದಕ್ಕೆ ಪ್ರತ್ಯೇಕ ಪಟ್ಟಿಯನ್ನು ಪ್ರಕಟಿಸಲಾಗುವುದು.

ಸಹಿ/-
ವಿಶೇಷಾಧಿಕಾರಿ
ಕೇಂದ್ರೀಕೃತ ದಾಖಲಾತಿ ಘಟಕ
ಬೆಂಗಳೂರು